**ದಿನಾಂಕಃ 17.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ ಪಿ.ಡಿ. ವಕೀಲರಿಂದಃ-**

1) ಆರೋಪಿ ನನ್ನ ಸಂಬಂಧಿಯಲ್ಲ. ಪ್ರಸ್ತುತ ಪ್ರಕರಣದ ವ್ಯವಹಾರವನ್ನು ಹೊರತುಪಡಿಸಿ ಬೇರೇ ಯಾವುದೇ ವ್ಯವಹಾರ ನಮ್ಮ ಮಧ್ಯೇ ಆಗಿಲ್ಲ. ಆರೋಪಿಯ ಸ್ವಂತ ವಿಳಾಸ ಹಲಸಿನಮರದೊಡ್ಡಿ ಅಲ್ಲ ಎಂದು ನಾನು ಕೊಂಡಿರುವುದು ಹಲಸಿನಮರದೊಡ್ಡಿ ಎಂದು ನುಡಿಯುುತ್ತಾರೆ. ನಾನು ಹಾಗೂ ನನ್ನ ತಮ್ಮ ಜಯರಾಜ್ ಯಾವುದೇ ಚೀಟಿ ವ್ಯವಹಾರ ಮಾಡುವುದಿಲ್ಲ. ಆರೋಪಿ ನನ್ನ ತಮ್ಮ ಜಯರಾಜ್ ಬಳಿ ಚೀಟಿ ಹಾಕಿದ್ದರು ಎಂದು ಆ ವಿಷಯ ನನಗೆ ಗೊತ್ತಿಲ್ಲ. ಆರೋಪಿ ನಿಮ್ಮ ತಮ್ಮನಿಗೆ ಪೋನ್ ಪೇ ಹಾಗೂ ಗೂಗಲ್ ಪೇ ಮೂಲಕ ಪಾವತಿ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

2) ನನ್ನ ತಮ್ಮ ಚೀಟಿ ಹಾಕುತ್ತಿದ್ದವರಿಂದ ಖಾಲಿ ಬಾಂಡ್ ಪೇಪರ್ ಹಾಗೂ ಖಾಲಿ ಚೆಕ್ಕುಗಳನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಮ್ಮ ತಮ್ಮ ಆರೋಪಿ ಬಳಿ ಎರಡು ಖಾಲಿ ಬಾಂಡ್ ಪೇಪರ್ ಗಳು ಹಾಗೂ ಎರಡು ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಒಂದು ಖಾಲಿ ಚೆಕ್ಕನ್ನು ನನ್ನ ತಮ್ಮ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖಾಲಿ ಚೆಕ್ ಪ್ರಸ್ತುತ ಪ್ರಕರಣದ ನಿಪಿ.1 ಎಂದರೆ ಸರಿ. ನನ್ನ ಮೂಲಕ ನನ್ನ ತಮ್ಮ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿದ್ದಾರೆ ಎಂದರೆ ಸರಿಯಲ.

3) ನಾನು 4 ಲಕ್ಷ ರೂ ಉಳಿತಾಯ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು 2 ಲಕ್ಷರೂ ಗಳನ್ನು ಸಾಲವಾಗಿ ನನ್ನ ಬಾಮ್ಮೈದುನನ ಬಳಿ ಹಾಗೂ 3 ಲಕ್ಷ ರೂಗಳನ್ನು ನನ್ನ

ತಮ್ಮನ ಬಳಿ ಪಡೆದುಕೊಂಡಿದ್ದೇನೆ. ಈ ವಿಚಾರವನ್ನು ನನ್ನ ಪಿರ್ಯಾದಿನಲ್ಲಿ ನಮೂದಿಸಿಲ್ಲ. ಆರೋಪಿ ಯಾವ ದಿನಾಂಕದಂದು ನನ್ನ ಬಳಿ ಸಾಲ ಕೇಳಿದರು ಹಾಗೂ ನಿರ್ದಿಷ್ಟ ದಿನಾಂಕದಂದು ಆರೋಪಿಗೆ ಸಾಲ ಕೊಟ್ಟಿರುವ ಬಗ್ಗೆ ನನ್ನ ಪಿರ್ಯಾದಿನಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ನಾನು ಸಾಲ ನೀಡಿದ್ದೇನೆ ಆದರೆ ನನಗೆ ದಿನಾಂಕ ಹೇಳಲು ಗೊತ್ತಾಗುವುದಿಲ್ಲ. ನನ್ನ ಬಳಿ ರೂ.9 ಲಕ್ಷ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡಿರುವ ಬಗ್ಗೆಯೂ ಸಹಾ ಯಾವುದೇ ದಾಖಲೆ ಇಲ್ಲ.

4) ಆರೋಪಿ ಮನೆಗೂ ಹಾಗೂ ನನ್ನ ತಮ್ಮ ಜಯರಾಜ್ ಮನೆಗೂ ಒಂದೂವರೆ ಕಿ.ಮೀ. ಅಂತರವಿದೆ. ನೀವು ಆರೋಪಿಗೆ ಹಣ ನೀಡಿದ್ದೇನೆ ಎಂದು ಹೇಳಲಾದ ಸಂದರ್ಭದಲ್ಲಿ ಕೋವಿಡ್ ಇದ್ದು ಯಾರೂ ಸಹ ಮನೆಯಿಂದ ಹೊರಗೆ ಹೋಗುವಂತಿರಲಿಲ್ಲ ಎಂದರೆ ಸಾಕ್ಷಿ ನಾನು ಮೊದಲು ಆರೋಪಿಗೆ 4 ಲಕ್ಷ ನೀಡಿದ್ದೆ ನಂತರದಲ್ಲಿ ಕೋವಿಡ್ ನಿಯಮಗಳು ಬಂದಿದ್ದು ಎಂದು ನುಡಿಯುತ್ತಾರೆ. ಮೊದಲನೇ ವಾರ ಮಾರ್ಚ್ 2020 ರಲ್ಲಿ ನನಗೂ ಆರೋಪಿಗೂ ಯಾವುದೇ ವ್ಯವಹಾರ ಇರಲಿಲ್ಲ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಆದರೆ ವ್ಯವಹಾರ ಇತ್ತು ಎಂದು ನುಡಿಯುತ್ತಾರೆ. ನನ್ನ ತಮ್ಮ ಜಯರಾಜ್ ಹಾಗೂ ಶಿವಸ್ವಾಮಿ ರವರಿಂದ ಸಾಕ್ಷ್ಯ ನುಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನಗೂ ಮತ್ತು ಆರೋಪಿಗೂ ಯಾವುದೇ ವೈಯಕ್ತಿಯ ಪರಿಚಯ ಇರಲಿಲ್ಲ ಎಂದರೇ ಸರಿಯಲ್ಲ. ಆರೋಪಿ ನನ್ನಿಂದ ಎಂದೂ ಸಹ ಕೇಳಲಿಲ್ಲ ಹಾಗೂ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾಲ ತೀರುವಳಿಗಾಗಿ ನಿಪಿ.1 ಅನ್ನು ನನಗೆ ನೀಡಿಲ್ಲ ಎಂದರೆ ಸರಿಯಲ್ಲ.

5) ಆರೋಪಿಗೆ ಲಿಖಿತ ರೂಪದಲ್ಲಿ ನಾನು ನೋಟೀಸ್ ನೀಡಿಲ್ಲ. ನಿಪಿ.7 ಮತ್ತು 8 ರಲ್ಲಿ ಇರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ

ಬರವಣಿಗೆ ಮತ್ತು ಸಹಿ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ನನಗೆ ಬರೆದುಕೊಟ್ಟಿರುವುದು ಎಂದು ನುಡಿಯುತ್ತಾರೆ. ಆರೋಪಿ ನನ್ನ ತಮ್ಮನಿಗೆ ಭದ್ರತೆಯ ಸಲುವಾಗಿ ನೀಡಿದ ಚೆಕ್ಕನ್ನು ನಾನು ಹಾಗೂ ನನ್ನ ತಮ್ಮ ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚೀಟಿ ವ್ಯವಹಾರ ಮುಗಿದ ಮೇಲೆ ಆರೋಪಿ ನಿಮ್ಮ ತಮ್ಮನ ಬಳಿ ಹೋಗಿ ಅವರು ಭದ್ರತೆಗಾಗಿ ನೀಡಿದ ಖಾಲಿ ಬಾಂಡ್ ಪೇಪರ್‌ಗಳು ಹಾಗೂ ಖಾಲಿ ಚೆಕ್ಕುಗಳನ್ನು ವಾಪಸ್ಸು ಕೇಳಿದಾಗ ನೀಡದೇ ಒಂದಲ್ಲಾ ಒಂದು ಕಾರಣ ಹೇಳಿ ಪ್ರಸ್ತುತ ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಆರ್ಥಿಕಾವಾಗಿ ಸಾಮರ್ಥ್ಯರಾಗಿದ್ದು ನಿಮ್ಮಿಂದ ಅಥವಾ ಬೇರೆ ಯಾರಿಂದಲೂ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯಲು ಹಾಗೂ ಸೈಟನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

6) ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**